ಹೆಚ್ಚು ಪ್ರೀತಿಸುತ್ತಿದ್ದಳು – ಅದಕ್ಕೇ ಗೆದ್ದು ಪಡೆದುಕೊಂಡಿದ್ದಾಳೆ!

ಸಮ್ಮತಿಗೆ ತನ್ನ ಅಮ್ಮ ಮತ್ತು ಶಾಲೆಯನ್ನು ಬಿಟ್ಟರೆ ಮತ್ತೂ ಒಂದು ಸುಂದರ ಜಗತ್ತು ಇದೆ – ಅದು ಮಂಗಳೂರಿನ ದೊಡ್ಡಮ್ಮನ ಮನೆ. ಅಲ್ಲಿ ಅವಳಿಗೆ ಓರಗೆಯ ತನ್ಮಯಿ ಇದ್ದಾಳೆ; ದೊಡ್ಡಪ್ಪ ಇದ್ದಾರೆ. ಅವರೊಂದಿಗೆ ಇರುವುದು ಎಂದರೆ ಬೆಂಗಳೂರಿನ ತನ್ನ ಮನೆಗಿಂತಲೂ ಹೆಚ್ಚು ಸುಖ–ನೆಮ್ಮದಿ. ಇತ್ತೀಚೆಗೆ ಅಂದರೆ, ಅವಳ ಮಿಡ್ಲ್ ಸ್ಕೂಲು ಮುಗಿಯುತ್ತಿದೆ ಅನ್ನುವಷ್ಟರಲ್ಲಿ ದೊಡ್ಡಮ್ಮನ ಮನೆಯನ್ನು ಅತಿಯಾಗಿ ಹಚ್ಚಿಕೊಂಡುಬಿಟ್ಟಿದ್ದಾಳೆ. ಸಹಜವಾಗಿ ಪರಿಣತಿಗೆ ಇದರಿಂದ ಆತಂಕವೂ ಆಗತೊಡಗಿದೆ. ಮೊನ್ನೆ ಮೊನ್ನೆ ಪರೀಕ್ಷೆಗಳನ್ನೆಲ್ಲ ಮುಗಿಸಿಕೊಂಡು ಬೇಸಿಗೆ ರಜೆಗೆಂದು ಮಂಗಳೂರಿಗೆ ಹೋಗಿದ್ದ ಮಗಳು, ಅಹವಾಲಿನಂಥ ಬೇಡಿಕೆಯೊಂದನ್ನು ಮುಂದಿಟ್ಟಿದ್ದಾಳೆ. ತಾನು ಮಂಗಳೂರಿನಲ್ಲಿಯೇ ಹೈಸ್ಕೂಲು ಸೇರಲು ಇಷ್ಟಪಡುವುದು ಮತ್ತು ಅದೂ ತನ್ನ ದೊಡ್ಡಮ್ಮನೇ ಟೀಚರ್ ಆಗಿರುವ ಶಾಲೆಯಲ್ಲಿಯೇ! ಅವಳ ಇಚ್ಛೆಯನ್ನು ಕೇಳಿದ ಕೂಡಲೇ ಪರಿಣತಿಯ ಎದೆ ಕುಸಿಯಿತಾದರೂ ಕ್ರಮೇಣ, ಅದೆಲ್ಲಾ ಆದರೆ ಹೋದರೆ ತಾನೇ ಎಂದುಕೊಂಡು ಸಮಾಧಾನದಲ್ಲಿಯೇ ಇದ್ದಾಳೆ. ಇನ್ನು ತನ್ನ ಅಕ್ಕ ಪಾಠ ಮಾಡುತ್ತಿದ್ದ ಶಾಲೆ ಎಲ್ಲ ರೀತಿಯಲ್ಲೂ ಪ್ರತಿಷ್ಠಿತ ವಿದ್ಯಾಸಂಸ್ಥೆ; ಬೆಂಗಳೂರಿನ ಯಾವುದೇ ಅತ್ಯುತ್ತಮ ಶಾಲೆಗಿಂತ ಕಡಿಮೆ ಇಲ್ಲ. ಅವಳ ದೊಡ್ಡಮ್ಮ ತನ್ನಂತೆ ಬರಿ ಕಕ್ಕುಲಾತಿಯಿಂದಷ್ಟೇ ಅಲ್ಲ, ಮುದ್ದಿಗೆ ಮುದ್ದು, ಗುದ್ದಿಗೆ ಗುದ್ದು ಅನ್ನುವಂತೆ, ತನಗಿಂತಲೂ ಹೆಚ್ಚು ಮುತುವರ್ಜಿಯಲ್ಲಿ ಮಗಳನ್ನು ಬೆಳೆಸುತ್ತಾಳೆ ಅನ್ನುವುದರಲ್ಲಿ ಅನುಮಾನವೇ ಇಲ್ಲ. ದೊಡ್ಡಪ್ಪನಂತೂ ಅವಳನ್ನು ತನ್ನ ಮಗಳಿಗಿಂತಲೂ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಇವೆಲ್ಲಕ್ಕೂ ಮಿಗಿಲಾಗಿ, ಸಮ್ಮತಿಯೇ ಇಷ್ಟಪಟ್ಟು ಅಲ್ಲಿಯೇ ಇದ್ದುಕೊಂಡು ಓದಬೇಕು ಅಂದುಕೊಂಡಿದ್ದಾಳೆ. ಅಂದಮೇಲೆ ತನಗೇಕೆ ಆತಂಕ? ಏಕೆ ಭಯ?

ಅವಳ ಅರಿವಿಗೆ ಬಂದಿಲ್ಲದಿರಬಹುದು – ಇದು ಬರಿಯ ಭಯವಲ್ಲ; ಇದರ ಒಳಗೆಲ್ಲೋ ಅಭಯದ ಎಳೆಯೊಂದಿದೆ! ಭವಿಷ್ಯದ ಭರವಸೆಯ ಸುಳಿವೊಂದಿದೆ! ಇತ್ತೀಚೆಗೆ ಅಕ್ಕನ ಪ್ರಸ್ತಾಪವೊಂದರಿಂದ ಮೊಳೆತ ಭಾವ ಅದು. ಆಜೀವ ಪರ್ಯಂತ ಒಂಟಿತನ ತನ್ನ ಆಯ್ಕೆ ಆಗಿರಲಿಲ್ಲ; ಅದು ಹೇಗೋ ಪ್ರಾಪ್ತವಾದಾಗ, ಅದನ್ನು ಸಹಜ ಎಂಬಂತೆ ಸ್ವೀಕರಿಸಿಯಾಗಿದೆ. ತಾನು ಯಾವತ್ತೂ ಹೀಗೆ ಇರಬಲ್ಲೆನೇ? ಇಂದಿನಂತೆ ನಾಳೆ, ನಾಳೆಯಂತೆ ನಾಡಿದ್ದು ಸರಿ. ಆದರೆ, ಊಹೆಗೂ ನಿಲುಕದ ನಾಡಿದ್ದುಗಳ ಆಚೆಗಿನ ಸಹಸ್ರ ಸಹಸ್ರ ದಿನಗಳಿಗೆ ತಾನು ನಿಜಕ್ಕೂ ಸಜ್ಜಾಗಿರುವೆನೇ? ಅಕ್ಕ, ನಾಲ್ಕೈದು ವರ್ಷಗಳ ಹಿಂದೆಯೇ ಇಂತಹ ಯೋಚನೆಯನ್ನು ಮೆಲ್ಲನೆ ಉಸುರಿದ್ದಳು...

“ಪರಿ, ನೋಡು, ನೀನು ಏನನ್ನೂ ಬಾಯಿಬಿಟ್ಟು ಹೇಳದಿದ್ದರೂ ನಾನು ಬಲ್ಲೆ – ನಮಗೆ ಒಂಟಿತನ ಆಗದ ಮಾತು. ನಿನ್ನ ಭಾವನವರು ಬರೀ ಆರು ತಿಂಗಳು ಸಿಂಗಪುರಕ್ಕೆ ಹೋಗಿದ್ದಾಗ ನಾನು ಅನುಭವಿಸಿದ್ದೇನೆ. ನೀನು ಆರು ವರ್ಷಗಳಿಂದ ಒಬ್ಬಂಟಿಯಾಗಿದ್ದಿ. ಈಗೇನೋ ಸುಖವಾಗಿಯೇ ಇದ್ದೀಯ. ನೀನು ಸುಳ್ಳು ಸುಳ್ಳೇ ಸುಖವನ್ನು ನಟಿಸುತ್ತಿರುವೆ ಎಂದೇನೂ ಹೇಳುತ್ತಿಲ್ಲ. ಆದರೆ, ನಿನಗೆ ಗೊತ್ತಿಲ್ಲದೇ ಇರಲು ಸಾಧ್ಯವೇ ಇಲ್ಲ – ನೀನು ನಿಂತಿರುವುದು ಮರಳು ಮಣ್ಣಿನ ನೆಲದ ಮೇಲೆ. ಪರಿ, ನಿಜ ಹೇಳು, ನಿನಗೆ ಯಾವತ್ತೂ ಕಾಲು ಕುಸಿಯುವ ಭಯ ಆಗಿಲ್ಲವೇ? ಭವಿಷ್ಯದ ಬಗ್ಗೆ ಇಂತಹ ಆತಂಕವನ್ನು ಯಾಕೆ ಅನುಭವಿಸಬೇಕು, ಹೇಳು? ಅಂತಹ ಅನಿವಾರ್ಯತೆ ಏನಿದೆ ನಿನಗೆ? ಪುರುಷನಿಲ್ಲದೆ ಭವಿಷ್ಯವೇ ಇಲ್ಲ ಎಂದು ಬೊಗಳೆ ಬಿಡುವುದಿಲ್ಲ ನಾನು. ಆದರೆ, ಪೂರ್ಣತೆಗೆ ಗಂಡಿಗೊಂದು ಹೆಣ್ಣು, ಹೆಣ್ಣಿಗೊಂದು ಗಂಡು – ಇದು ಪ್ರಕೃತಿಯ ನಿಯಮವಲ್ಲವೇ ಪರಿ? ನಾನು ಹೊಸತೇನನ್ನೂ ಹೇಳುತ್ತಿಲ್ಲ. ನಮ್ಮ ಅಪ್ಪಯ್ಯ ಸತ್ತಾಗ ಅಮ್ಮನಿಗೆ ಬರೀ ಮೂವತ್ತೈದು ವರ್ಷ. ಹೆಚ್ಚು ಕಡಿಮೆ ನಿನ್ನದೇ ವಯಸ್ಸು. ನಿನಗೂ ಗೊತ್ತು ಅವಳು ಸಾಯುವವರೆಗೂ ತನ್ನನ್ನು